**ಶ್ರೀಮತಿ ಸುಮಾ ವಸಂತ.**— ಅಧ್ಯಕ್ಷರೆ, ಕೊಡಗು ಜಿಲ್ಲೆಗೆ ಆಸ್ಪತ್ರೆ ಕಟ್ಟಡಗಳನ್ನು ಕಟ್ಟಲು ಎಷ್ಟು ಹಣ ಬಿಡುಗಡೆ ಮಾಡಲಾಗಿದೆ? ಎಷ್ಟು ಹಣ ಉಳಿದಿದೆ? ಜಿಲ್ಲೆಯಲ್ಲಿ ಹೊಸ ಕಟ್ಟಡಗಳು ಎಷ್ಟೆಷ್ಟು ಆಗಿವೆ?

**ಶ್ರೀ ಹೆಚ್.ಟಿ. ಕೃಷ್ಣಪ್ಪ.**— ಅಧ್ಯಕ್ಷರೆ, ವಿವರಗಳು ಈಗ ನನ್ನ ಕಡೆ ಇಲ್ಲ. ಜಿಲ್ಲೆಯಲ್ಲಿ ಒಟ್ಟು ಖರ್ಚು ಮಾಡಿದ ಹಣದ ವಿವರಗಳನ್ನು ಕೊಟ್ಟಿದ್ದೇನೆ. ಬಾಕಿ ವಿವರಗಳನ್ನು ಅವರಿಗೆ ಒದಗಿಸಿಕೊಡುತ್ತೇನೆ.

**ಶ್ರೀಮತಿ ಸುಮಾ ವಸಂತ.**— ಮಡಿಕೇರಿಯಲ್ಲಿ ಹೊಸ ಕಟ್ಟಡ ಆಗುತ್ತಿದೆ. ಅದಕ್ಕೆ ಸಂಬಂಧಪಟ್ಟಂತೆ ಹಣ ಬಿಡುಗಡೆಯಾಗಿಲ್ಲ.

**ಶ್ರೀ ಹೆಚ್.ಟಿ. ಕೃಷ್ಣಪ್ಪ.**— ಹಣವನ್ನು ಲೋಕೋಪಯೋಗಿ ಇಲಾಖೆಗೆ ಕೊಡುತ್ತೇವೆ. ಅವರು ಕಂಟ್ರಾಕ್ಟರುಗಳನ್ನು ನೇಮಕ ಮಾಡಿ ಕೆಲಸ ಮಾಡಿಸಬೇಕು. ಅನಿರೀಕ್ಷಿತ ತೊಂದರೆಗಳಿಂದಾಗಿ ಕೆಲಸ ನಿಧಾನವಾಗುತ್ತದೆ. ಇಲ್ಲಿ ಹಣದ ಕೊರತೆ ಬಂದಿಲ್ಲ. ತಮಗೆ ಅಂಕಿ ಅಂಶಗಳನ್ನು ಕೊಟ್ಟಿರುವ ಪ್ರಕಾರ ಕೊಟ್ಟ ಹಣ ೧೨.೫೬ ಲಕ್ಷ ಖರ್ಚಾಗಿರುವುದು ೪.೫೬ ಲಕ್ಷ. ಆದುದರಿಂದ ಹಣದ ಕೊರತೆಯ ಪ್ರಶ್ನೆ ಬಂದಿಲ್ಲ.

**ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.**— ನೀವು ಬಜೆಟ್‌ನಲ್ಲಿ ಇದನ್ನು ಸೇರಿಸಿರಬಹುದು. ಆದರೆ ಎಲ್.ಓ.ಸಿ ರಿಲೀಜ್ ಮಾಡಿದರೆ ಮ್ಯಾತ ಅವರಿಗೆ ಹಣ ಹೋಗುತ್ತದೆ. ಆಜಿಲ್ಲೆಯಲ್ಲಿಎಲ್.ಓ.ಸಿ.ರಿಲೀಸ್ ಮಾಡಿಲ್ಲ. ಆದುದರಿಂದ ಹಣ ಹೋಗಿಲ್ಲ. ಕೆಲಸ ಕೂಡ ನಿಂತಿದೆ. ಹಣವನ್ನು ಯಾವಾಗ ರಿಲೀಸ್ ಮಾಡಿದ್ದಾರೆ ಎಂಬುದನ್ನು ತಿಳಿಸಿ?

**ಶ್ರೀ ಹೆಚ್.ಟಿ. ಕೃಷ್ಣಪ್ಪ.**— ಎಲ್.ಓ.ಸಿ. ಕಟ್ಟತಕ್ಕವರು ಕಾಮಗಾರಿ ಇಲಾಖೆಯವರು. ಎಲ್.ಓ.ಸಿ. ಎಷ್ಟಕ್ಕೆ ಕೊಟ್ಟಿದ್ದಾರೆ ಎಂಬುದರ ಬಗ್ಗೆ ಈಗ ಮಾಹಿತಿ ಇಲ್ಲ, ಮಾಹಿತಿ ಪಡೆದು ತಮಗೆ ತಿಳಿಸುತ್ತೇನೆ.

**ಅಧ್ಯಕ್ಷರು.** ಹೆಚ್ಚು ಹಣ ಕೊಡುವುದಾದರೆ ಕೊಡಿ.

**ಶ್ರೀಮತಿ ಸುಮಾ ವಸಂತ್ (ನಿರಾಜಪೇಟೆ).**— ಸನ್ಮಾನ್ಯ ಅಧ್ಯಕ್ಷರೇ, ಮಡಿಕೇರಿಯಲ್ಲಿ ಮಾತ್ರ ವಸತಿಗೃಹಗಳು ಇವೆ. ಸರ್ಕಾರದವರು ಎಲ್ಲಾ ವೈದ್ಯಾಧಿಕಾರಿಗಳಿಗೂವಸತಿಗೃಹಗಳನ್ನು ಕಟ್ಟಿಸಿಕೊಡುವ ಕ್ರಮ ತೆಗೆದುಕೊಳ್ಳುತ್ತಾರೆಯೇ?

**ಶ್ರೀ ಹೆಚ್. ಟಿ. ಕೃಷ್ಣಪ್ಪ.**— ಸನ್ಮಾನ್ಯ ಅಧ್ಯಕ್ಷರೇ, ನಾನು ಬೇರೆ ಪ್ರಶ್ನೆಗೆ ಉತ್ತರ ಕೊಡುವಾಗ ಈಗಾಗಲೇ ಹೇಳಿದ್ದೇನೆ. ನಾವು ಪ್ರಥಮವಾಗಿ ೪ ಜಿಲ್ಲೆಗಳಲ್ಲಿ ಹೆಡ್‌ಕೋ ಯೋಜನೆ ಮುಖಾಂತರ ಆರೋಗ್ಯ ಇಲಾಖೆಯಲ್ಲಿ ವಸತಿಗೃಹಗಳನ್ನು ಕಟ್ಟಿಸಿಕೊಡತಕ್ಕ ಯೋಜನೆಯನ್ನು ಹಾಕಿಕೊಂಡಿದ್ದೇವೆ.

**ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.**— ಯಾವ ಯಾವ ಜಿಲ್ಲೆಗಳು ಎಂದು ಹೇಳಿ?

**ಶ್ರೀ ಹೆಚ್.ಟಿ. ಕೃಷ್ಣಪ್ಪ.**— ಕೋಲಾರ, ಬಳ್ಳಾರಿ, ಕೊಡಗು ಮತ್ತು ಕಾರವಾರ ಜಿಲ್ಲೆಗಳಲ್ಲಿ ಈ ಯೋಜನೆಗಳನ್ನು ಹಾಕಿಕೊಂಡಿದ್ದೇವೆ.

## ಅಂಕಲಗಿ ಗ್ರಾಮದಲ್ಲಿ ವಾಹನ ನಿಲ್ದಾಣ

೭೧೦. **ಶ್ರೀ ಎಂ. ಎಲ್. ಮುತ್ತಣ್ಣವರ್ (ಗೋಕಾಕ್).**— ಮಾನ್ಯ ಸಾರಿಗೆ, ಸಣ್ಣ ಉಳಿತಾಯ ಮತ್ತು ಬಂಧಿಖಾನೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಅಂಕಲಗಿ ಗ್ರಾಮದಲ್ಲಿ ಬಸ್ ನಿಲ್ದಾಣ ನಿರ್ಮಿಸುವುದು ಸರಕಾರದವರ ಯೋಜನೆಯಲ್ಲಿದೆಯೇ?

ಆ) ಹಾಗಿಲ್ಲದಲ್ಲಿ ತಡವಾಗಲು ಕಾರಣಗಳೇನು?

ಶ್ರೀ ವೀರಣ್ಣ (ಸಾರಿಗೆ ಸಣ್ಣ ಉಳಿತಾಯ ಮತ್ತು ಬಂಧೀಖಾನೆ ಮಂತ್ರಿಗಳು).—

ಅ) ಇದೆ.

ಆ) ಈ ವರ್ಷದಲ್ಲಿ ಬಸ್ ನಿಲ್ದಾಣ ನಿರ್ಮಿಸುವ ಕೆಲಸ ಪ್ರಾರಂಭಿಸಲಾಗುವುದು.

ಸನ್ಮಾನ್ಯ ಅಧ್ಯಕ್ಷರೇ, ನನ್ನ ಉತ್ತರದ ಜೊತೆಗೆ ನಾನು ಒಂದು ವಿಷಯವನ್ನು ಹೇಗೆಲಂ ಇಚ್ಚಿಸುತ್ತೇನೆ. ಅಲ್ಲಿಯ ಪಂಚಾಯತ್‌ನವರು ೨೦೦ ಅಡಿ ಉದ್ದ ಹಾಗೂ ೨೦೦ ಅಡಿ ಅಗಲ ಜಮೀನನ್ನು ಕೊಟ್ಟಿದ್ದಾರೆ, ಆ ಜಮೀನು ಬಸ್ ಸ್ಟ್ಯಾಂಡ್ ಕಟ್ಟಲು ಸಾಕಾಗುವುದಿಲ್ಲ. ಈ ಜಮೀನಿನಲ್ಲಿ ಬರಿ ಬಸ್ ಶೆಲ್ಟರ್ ಮಾತ್ರ ಕಟ್ಟಲು ಸಾಧ್ಯವಾಗಬಹುದು. ಆದುದರಿಂದ ನಾನು ಸನ್ಮಾನ್ಯ ಸದಸ್ಯರಲ್ಲಿ ವಿನಂತಿಸಿಕೊಳ್ಳುವುದೇನೆಂದರೆ ಅಲ್ಲಿಯ ಪಂಚಾಯತಿಯವರು ಅರ್ಧ ಅಥವಾ ಮುಕ್ಕಾಲು ಜಮೀನನ್ನು ಕೊಡಲು ಮುಂದೆ ಬಂದರೆ ತಕ್ಷಣವೇ ಅಲ್ಲಿಯ ಬಸ್ ಸ್ಟ್ಯಾಂಡನ್ನು ನಿರ್ಮಿಸುವಂತಹ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇನೆಂದು ಭರವಸೆ ಕೊಡುತ್ತೇನೆ.

ಶ್ರೀ ಬಿ. ಎಲ್. ಮುತ್ತಣ್ಣವರ್.—ಸನ್ಮಾನ್ಯ ಅಧ್ಯಕ್ಷರೇ ಸಾರಿಗೆ ಇಲಾಖೆಗೆ ರಿಪೀರಲ್ಲಿ ಜಾಗವನ್ನು ಕೊಡಲಾಗಿದೆ. ಅಲ್ಲದೆ ೨೫ ಸಾವಿರ ರೂಪಾಯಿಗಳ ಡಿಬೆಂಚರ್ ಲೋನನ್ನು ಸಹ ಕೊಟ್ಟಿದ್ದಾರೆ. ಆದರೆ ಇನ್ನೂ ಏನು ಕಾರ್ಯಕ್ರಮ ನಡೆದಿಲ್ಲ.

ಶ್ರೀ ವೀರಣ್ಣ.—ಸನ್ಮಾನ್ಯ ಅಧ್ಯಕ್ಷರೇ, ಸಾರ್ವಜನಿಕರ ಹಣ ನಮಗೆ ಬೇಕಾಗಿಲ್ಲ. ನಾವು ಅದರಿಂದ ಒಂದು ಪೈಸೆಯನ್ನೂ ಸಹ ನಿರೀಕ್ಷೆ ಮಾಡುವುದಿಲ್ಲ. ನಮಗೆ ಬೇಕಾಗಿರುವುದು ಬಸ್ ಸ್ಟ್ಯಾಂಡ್ ಕಟ್ಟಲು ಜಾಗ. ಈಗ ಪಂಚಾಯತಿಯವರು ಕೊಟ್ಟಿರುವ ಜಾಗದಲ್ಲಿ ಬಸ್ ಶೆಲ್ಟರ್ ಮಾತ್ರ ಕಟ್ಟಬಹುದು. ಅರ್ಧ ಅಥವಾ ಮುಕ್ಕಾಲು ಎಕರೆ ಜಮೀನನ್ನು ಪಂಚಾಯತಿಯವರು ಕೊಟ್ಟರೆ ಇನ್ನು ೧೦-೧೫ ದಿನಗಳೊಳಗೆ ಫೌಂಡೇಷನ್ ಸ್ಟೋನ್ ಹಾಕಿ ಕಾರ್ಯಕ್ರಮ ಪ್ರಾರಂಭಿಸುತ್ತೇನೆಂದು ತಿಳಿಸುತ್ತೇನೆ.

ಶ್ರೀ ಎಂ. ಎಲ್. ಮುತ್ತಣ್ಣವರ್.—ಸನ್ಮಾನ್ಯ ಅಧ್ಯಕ್ಷರೇ, ಕಳೆದ ವರ್ಷ ಜಾಗವನ್ನು ಹ್ಯಾಂಡ್ ಓವರ್ ಮಾಡಿರುವುದು ಸರ್ಕಾರಕ್ಕೆ ಗೊತ್ತಿದೆ. ಆಗ ಸಿಂಧ್ಯಾರವರು ಸಾರಿಗೆ ಮಂತ್ರಿಗಳಾಗಿದ್ದರು. ಕೆ.ಎಸ್.ಆರ್.ಟಿ.ಸಿ.ಯವರು ಈಗಾಗಲೇ ಅದನ್ನು ಪೊಸಿಷನ್ ತೆಗೆದುಕೊಂಡಿದ್ದಾರೆ. ಆದರೆ ಏನೂ ಕೆಲಸ ಆಗಿಲ್ಲ.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಸನ್ಮಾನ್ಯ ಅಧ್ಯಕ್ಷರೇ, ಪಂಚಾಯತಿಯವರು ಕೊಟ್ಟಿರುವ ಜಾಗದಲ್ಲಿ ಕೆಲಸ ಪ್ರಾರಂಭ ಮಾಡಬೇಕಾದರೆ ಒಂದು ಸುಂದರವಾದ ಬಸ್ ಶೆಲ್ಟರ್ ಮಾತ್ರ ಕಟ್ಟಿ ಬಹುದು. ಬಸ್ ಸ್ಟ್ಯಾಂಡನ್ನು ಕಟ್ಟಲು ಸಾಧ್ಯ ಇಲ್ಲ.

## ಅಲ್ಪಾವಧಿ ಪ್ರಶ್ನೆಗಳ ಸಂಖ್ಯೆ–೧

### ವಿತವ್ಯಯ ಕ್ರಮಗಳು

೧. ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಜಿಲ್ಲಾ ಆಡಳಿತವು ವಿತವ್ಯಯ ಕ್ರಮಗಳನ್ನು ಅನುಸರಿಸುವಂತೆ ಸರ್ಕಾರವು ಸೂಚನೆ ನೀಡಿದೆಯೆ ?

ಆ) ಈ ವಿಷಯದಲ್ಲಿ ಸರ್ಕಾರವು ಹೊರಡಿಸಿದ ಸೂಚನೆಗಳು ?

ಇ) ಈ ಸೂಚನೆಗಳನ್ನು ಹೊರಡಿಸಲು ಕಾರಣಗಳೇನು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ಹೌದು.